ಬೆಂಗಳೂರು ನಗರದಲ್ಲಿ ಬಿಡಿಎ ಮತಿಯಿಂದ 1999-2000 ಮತ್ತು 2000-2001ನೇ ಸಾಲಿನಲ್ಲಿ ಎಷ್ಟು ಕಟ್ಟಡಗಳನ್ನು ಒಡೆದುಹಾಕಲಾಗಿದೆ ;

ಆ) ಇದರಿಂದ ಪ್ರಾಧಿಕಾರ ವಶಪಡಿಸಿಕೊಂಡಿರುವ ಜಮೀನಿನ ಬೆಲೆ ಎಷ್ಟು ;

ಇ) ಈ ಅನಧಿಕೃತ ನಿರ್ಮಾಣ ಕಟ್ಟಡ ಕಾರಣ ಕರ್ತರಾದ ಅಧಿಕಾರಿಗಳ ಮೇಲೆ ಎಷ್ಟು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) 1999-2000 ಮತ್ತು 2000-2001ನೇ ಸಾಲಿನಲ್ಲಿ ಅನುಕ್ರಮವಾಗಿ 307 ಮತ್ತು 247 ಅನಧಿಕೃತ ಕಟ್ಟಡಗಳನ್ನು ಒಡೆದು ಹಾಕಲಾಗಿದೆ.

ಆ) ವಶಪಡಿಸಿಕೊಂಡಿರುವ ಜಮೀನಿನ ಬೆಲೆ 225 ಕೋಟಿ ರೂಪಾಯಿಗಳು.

ಇ) ಈ ಅನಧಿಕೃತ ನಿರ್ಮಾಣಗಳಿಗೆ ಜವಾಬ್ದಾರರಾದ ಅಧಿಕಾರಗಳ ಹೆಸರನ್ನು ತಿಳಿಯಲು ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಬೆಂಗಳೂರು ನಗರದಲ್ಲಿರುವ ವೈನ್ ಶಾಪ್‌ಗಳ ವ್ಯವಹಾರದ ಸಮಯ

2461(2598) ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರು ನಗರದಲ್ಲಿರುವ ವೈನ್ ಶಾಪ್‌ಗಳು ಮತ್ತು ಬಾರ್‌ಗಳ ಸಂಖ್ಯೆ ಎಷ್ಟು? (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ನೀಡುವುದು)

ಆ) ವೈನ್ ಶಾಪ್ ಮತ್ತು ಬಾರ್‌ಗಳು ಪ್ರತಿದಿನ ವ್ಯವಹಾರ ಸಮಯವನ್ನು ಸರ್ಕಾರ ನಿಗದಿಪಡಿಸಿದೆಯೇ? (ವಿವರಗಳನ್ನು ನೀಡುವುದು)

ಇ) ನಿಗದಿತ ಸಮಯದ ನಂತರವೂ ಕಾನೂನು ಬಾಹಿರವಾಗಿ ವ್ಯವಹಾರವನ್ನು ಮುಂದುವರಿಸುತ್ತಿರುವ ಈ ವೈನ್ ಶಾಪ್‌ಗಳಲ್ಲಿ ಕುಡಿಯಲು ಅವಕಾಶ ನೀಡುತ್ತಿರುವ ಪ್ರಕರಣಗಳಲ್ಲಿ ಸರ್ಕಾರ ಜರುಗಿಸಿದ ಕ್ರಮವೇನು?

ಈ) ಕಳೆದ 3 ವರ್ಷಗಳಲ್ಲಿ ಕ್ರಮವಾಗಿ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ಬೆಂಗಳೂರು ನಗರದಲ್ಲಿರುವ

(1) ವೈನ್ ಶಾಪ್‌ಗಳು 868

(2) ಬಾರ್‌ಗಳು 1233

ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ಹೌದು, ವಿವರಗಳು ಕೆಳಗಿನಂತಿವೆ.

ವೈನ್ ಶಾಪ್- ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 10-30 ಗಂಟೆವರೆಗೆ

ಬಾರ್- ಬೆಳಿಗ್ಗೆ 10 ಗಂಟೆಯಿಂದ ರಾತ್ರಿ 11-30 ಗಂಟೆವರೆಗೆ

ಇ) ನಿಗದಿತ ಅವಧಿಗೆ ಮೀರಿ ವ್ಯಾಪಾರ ನಡೆಸುತ್ತಿದ್ದ ಮತ್ತು ಈ ಅಂಗಡಿಗಳಲ್ಲಿ ಕುಡಿಯಲು ಅವಕಾಶ ನೀಡಿದ ವೈನ್ ಶಾಪ್‌ಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ.

ಈ) ವರ್ಷವಾರು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರಮ ಸಂಖ್ಯೆ	ವರ್ಷ	ಪ್ರಕರಣಗಳ ಸಂಖ್ಯೆ
1)	98-99	48
2)	99-2000	63
3)	2000-2001	82

ಅನುಬಂಧ

ಕ್ರಮ ಸಂಖ್ಯೆ	ವಿಧಾನಸಭಾ ಕ್ಷೇತ್ರ	CL-2 (ವೈನ್ ಶಾಪ್)	CL-9 (ಬಾರ್ ಮತ್ತು ರೆಸ್ಟೋರೆಂಟ್)
1	ಶಾಂತಿನಗರ	64	106
2	ಉತ್ತರಹಳ್ಳಿ	148	413
3	ಬಿನ್ನಿಪೇಟೆ	64	69
4	ಗಾಂಧಿನಗರ	52	64
5	ಜಯಮಹಲ್	48	39

1	2	3	4
6	ಯಲಹಂಕ	41	37
7	ಮಲ್ಲೇಶ್ವರಂ	49	57
8	ಭಾರತಿನಗರ	49	36
9	ಬಸವನಗುಡಿ	34	20
10	ರಾಜಾಜಿನಗರ	63	61
11	ವರ್ತೂರು	76	155
12	ಚಾಮರಾಜಪೇಟೆ	49	39
13	ಚಿಕ್ಕಪೇಟೆ	33	25
14	ಜಯನಗರ	56	64
15	ಶಿವಾಜಿನಗರ	42	48
	ಒಟ್ಟು	868	1233

ಕರ್ನಾಟಕ ಸೋಪ್ ಮತ್ತು ಮಾರ್ಜಕ ಕಾರ್ಖಾನೆ ಖಾಸಗೀಕರಣ

2462(2599) ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜಾಜಿನಗರದಲ್ಲಿರುವ ಕರ್ನಾಟಕ ಸರ್ಕಾರಿ ಸಾಬೂನು ಕಾರ್ಖಾನೆ ಕಳೆದ ವರ್ಷ ಲಾಭಗಳಿಸಿದ್ದು ನಿಜವೇ ;

ಆ) ಹಾಗಿದಲ್ಲಿ ಲಾಭದ ಪ್ರಮಾಣವೇನು ;

ಇ) ಲಾಭಗಳಿಸುತ್ತಿದ್ದರೂ ಈ ಕಾರ್ಖಾನೆಯನ್ನು ಖಾಸಗಿ ಮಾಡುವ ಯೋಜನೆಯನ್ನು ಸರ್ಕಾರ ಹೊಂದಿರುವುದು ನಿಜವೇ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :—

ಅ) ನಿಜ

ಆ) 31.3.2001ನೇ ಸಾಲಿನಲ್ಲಿ ಲಾಭದ ಪ್ರಮಾಣ ಸುಮಾರು 1.92 ಕೋಟಿ (ತಾತ್ಕಾಲಿಕ) ಆಗಿರುತ್ತದೆ.

ಸರ್ಕಾರದ ಪರಿಶೀಲನೆಯಲ್ಲಿದೆ.